# ಹಳೆಯ ಹಳಿಗೆ ದೇಸಾಯಿ?



ಹಿರಿಯ ನಿರ್ದೇಶಕ ಸುನೀಲ್ ಕುಮಾರ್ ದೇಸಾಯಿ ನಿರ್ದೇಶನದ ಹೊಸ ಚಿತ್ರ 'ಉದ್ಘರ್ಷ' ಕಳೆದ ವಾರ ಮಡಿಕೇರಿಯಲ್ಲಿ ಮುಹೂರ್ತ ನಡೆಸಿದೆ. ದೇಸಾಯಿ ಅವರ ಯಶಸ್ವಿ ಚಿತ್ರಗಳಲ್ಲೊಂದಾದ 'ಉತ್ಕರ್ಷ' ಚಿತ್ರದ ಶೀರ್ಷಿಕೆಯನ್ನು ನೆನಪಿಸುವಂತಿರುವ 'ಉದ್ಘರ್ಷ'ದ ಕಥನ ಕೂಡ ಥ್ರಿಲ್ಲರ್ ಪ್ರಕಾರಕ್ಕೆ ಸೇರಿದೆ.

ಕ್ರೈಂ–ಥ್ರಿಲ್ಲರ್ ದೇಸಾಯಿ ಅವರಿಗೆ ಪ್ರಿಯವಾದ ಪ್ರಕಾರ. ಜೋಡಿಯೊಂದು ಆಕಸ್ಮಿಕವಾಗಿ ಅಪಾಯಕ್ಕೆ ಸಿಲುಕಿಕೊಳ್ಳುವ ಕಥೆ 'ಉದ್ಘರ್ಷ' ಚಿತ್ರದ್ದು. ಚಿತ್ರದಲ್ಲಿ ನಾಯಕ ಮತ್ತು ನಾಯಕಿ ಎರಡು ಸಾರಿಯಷ್ಟೇ ಭೇಟಿಯಾಗುತ್ತಾರೆ ಎನ್ನುವುದು ಚಿತ್ರದ ವಿಶೇಷಗಳಲ್ಲೊಂದು. ನೋಡುಗರ ಕುತೂಹಲವನ್ನು ಹಿಡಿದಿಟ್ಟುಕೊಂಡು ರಂಜನೆಯನ್ನೂ ಉಣಬಡಿಸುವ ಪ್ರಯತ್ನ ನಿರ್ದೇಶಕರದು.

ಸಿನಿಮಾದ ಪ್ರಾರಂಭಿಕ ಹಂತದ ಚಿತ್ರೀಕರಣವನ್ನು ದೇಸಾಯಿ ಬಳಗ ಮಡಿಕೇರಿಯಲ್ಲೇ ನಡೆಸುತ್ತಿದೆ. ಅನೂಪ್ ಠಾಕೂರ್ ಸಿಂಗ್ ಹಾಗೂ ಧನ್ಸಿಕಾ 'ಉದ್ಘರ್ಷ'ದ ನಾಯಕ–ನಾಯಕಿ. ಅನೂಪ್ ಹೆಸರಾಂತ ದೇಹದಾರ್ಢ್ಯ ಪಟುವಾದರೆ, ಧನ್ಸಿಕಾ ಈಗಾಗಲೇ ತಮಿಳು–ತೆಲುಗು ಚಿತ್ರಗಳಲ್ಲಿ ಗುರ್ತಿಸಿಕೊಂಡವರು. ಇವರ ಜೊತೆಗೆ ಬಾಲಿವುಡ್‌ನ ಜನಪ್ರಿಯ ಖಳನಟ ಕಬೀರ್ ಖಾನ್ ಕೂಡ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರವಿವರ್ಮ ಸಾಹಸ ಸಂಯೋಜನೆ ಹಾಗೂ ವಿಷ್ಣುವರ್ಧನ್ ಛಾಯಾಗ್ರಹಣ ಚಿತ್ರಕ್ಕಿದೆ.




# ಒಲವು ಹಾಗೂ ಬದುಕಿನ ಚೆಲುವು!

ಜಯತೀರ್ಥ ನಿರ್ದೇಶನದ 'ವೆನಿಲಾ' ಸಿನಿಮಾದ ಚಿತ್ರೀಕರಣ ಹೆಚ್ಚೂಕಡಿಮೆ ಮುಕ್ತಾಯಗೊಂಡಿದೆ. ಕಿರಣ್ ಹಂಪಾಪುರ ಅವರ ಛಾಯಾಗ್ರಹಣದಲ್ಲಿ, ಉಡುಪಿ ಮತ್ತು ಮೈಸೂರಿನ ಪರಿಸರದಲ್ಲಿ ಸುಮಾರು ಒಂದೂವರೆ ತಿಂಗಳ ಕಾಲ ಚಿತ್ರತಂಡ ಶೂಟಿಂಗ್ ನಡೆಸಿದೆ. ಉಳಿದಿರುವುದು ವಿದೇಶದಲ್ಲಿ ನಡೆಯಬೇಕಿರುವ ಚಿತ್ರೀಕರಣ.

ಕನ್ನಡ ಚಿತ್ರರಂಗದ ಪ್ರಯೋಗಶೀಲ ನಿರ್ದೇಶಕರಲ್ಲಿ ಜಯತೀರ್ಥ ಅವರದು ಪ್ರಮುಖ ಹೆಸರು. 'ಒಲವೇ ಮಂದಾರ', 'ಟೋನಿ' ಹಾಗೂ 'ಬ್ಯೂಟಿಫುಲ್ ಮನಸುಗಳು' ಚಿತ್ರಗಳು ಅವರ ಪ್ರಯೋಗಶೀಲ ಮನಸ್ಥಿತಿ ಹಾಗೂ ಸದಭಿರುಚಿಯ ಉದಾಹರಣೆಗಳಂತಿವೆ. ಈ ಸಾಲಿಗೆ ಸೇರಲು 'ವೆನಿಲಾ' ಸಿದ್ಧವಾಗುತ್ತಿದೆ. 'ಒಲವೇ ಮಂದಾರ' ಚಿತ್ರದಂತೆ ಈ ಸಿನಿಮಾದಲ್ಲೂ ಒಲವಿನ ಹುಡುಕಾಟ ಹಾಗೂ ಬದುಕಿನ ಅರ್ಥಸಾಧ್ಯತೆಗಳ ಶೋಧ ಇರಲಿದೆಯಂತೆ. ಇದರ ಜೊತೆಗೆ ಸಸ್ಪೆನ್ಸ್ ಥ್ರಿಲ್ಲರ್ ಎಳೆಯೂ ಕಥೆಯಲ್ಲಿದೆ. ಕೊಲೆಯೊಂದರ ಹಿನ್ನೆಲೆಯನ್ನು ಅನಾವರಣಗೊಳಿಸುತ್ತಾ ಸಾಗುವ ಸಿನಿಮಾ, ವರ್ತಮಾನದ ತವಕ–ತಲ್ಲಣಗಳ ಕುರಿತು ಮಾತನಾಡಲಿದೆ.

'ವೆನಿಲಾ' ಬಳಗ ಸದ್ಯಕ್ಕೆ ಇಂಡೋನೇಷ್ಯಾದ ಬಾಲಿ ದ್ವೀಪದಲ್ಲಿ ಚಿತ್ರೀಕರಣ ನಡೆಸುವ ಸಿದ್ಧತೆ ನಡೆಸುತ್ತಿದೆ. ಬಾಲಿಯ ಸುಂದರ ಹೊರಾಂಗಣ ಹಾಗೂ ಸಾಂಸ್ಕೃತಿಕ ಸಿರಿವಂತಿಕೆ ಚಿತ್ರಕಥೆಗೆ ಪೂರಕವಾಗಿದೆಯಂತೆ.

ಅವಿನಾಶ್ ಮತ್ತು ಸ್ವಾತಿ ಚಿತ್ರದ ನಾಯಕ–ನಾಯಕಿ. ಅವಿನಾಶ್ ಅವರಿಗಿದು ನಾಯಕನಾಗಿ ಚೊಚ್ಚಿಲ ಸಿನಿಮಾ. 'ಬ್ಯೂಟಿಫುಲ್ ಮನಸುಗಳು' ಚಿತ್ರದ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದ ಸ್ವಾತಿ, 'ವೆನಿಲಾ' ಮೂಲಕ ನಾಯಕಿಯಾಗಿದ್ದಾರೆ. ಸ್ವಾತಿ ಕನ್ನಡ ಚಿತ್ರರಂಗದ ಭರವಸೆಯ ನಾಯಕಿಯರಲ್ಲೊಬ್ಬರಾಗಿ ರೂಪುಗೊಳ್ಳುವ ಭರವಸೆ ಜಯತೀರ್ಥ ಅವರದು. ರೆಹಮಾನ್, ಪಾವನಾ, ರವಿಶಂಕರ್‌ಗೌಡ ಹಾಗೂ ಬಿ. ಸುರೇಶ್ ತಾರಾಗಣದಲ್ಲಿರುವ ಇತರ ಪ್ರಮುಖ ಕಲಾವಿದರು. ಬಿ.ಜೆ. ಭರತ್ ಛಾಯಾಗ್ರಹಣ ಚಿತ್ರಕ್ಕಿದೆ.